ನಿಮ್ಮೊಡನೆ

# ಮದುವೆಯ ಈ ಬಂಧ

‘ಬೆಚ್ಚನೆಯ ಮನೆ, ವೆಚ್ಚಕ್ಕೆ ಹಣ, ಇಚ್ಛೆ ಅರಿತು ನಡೆವ ಸತಿ ಇರಲು ಅದೇ ಸ್ವರ್ಗ’ ಎಂಬ ನಿರಾಳ ಭಾವ ಎಲ್ಲ ಕಾಲಕ್ಕೂ ಪ್ರಸ್ತುತ ಎನಿಸಲಾರದು. ಗಂಡಿನ ದೃಷ್ಟಿಯಿಂದ ಇರುವ ಸ್ವರ್ಗ ಸುಖದ ಪರಿಕಲ್ಪನೆ ಹೆಣ್ಣಿನ ದೃಷ್ಟಿಯಲ್ಲಿ ಬದಲಾಗುತ್ತಿರುವುದೇ ಇದಕ್ಕೆ ಸ್ಥೂಲವಾದ ಕಾರಣ. ಕುಟುಂಬ ವ್ಯವಸ್ಥೆಯಲ್ಲಿ ಹೊರಗಡೆ ದುಡಿದು ತಂದುದನ್ನು ಒಳಗಡೆ ನಿರ್ವಹಿಸುವುದಕ್ಕೆ ಸೀಮಿತವಾಗಿದ್ದ ಹೆಣ್ಣಿನ ಪಾತ್ರ ಹೊರಗಡೆ ದುಡಿದು ತರುವುದಕ್ಕೂ ವಿಸ್ತರಣೆ ಆಗಿರುವುದು ಸಾಮಾಜಿಕ ನಡವಳಿಕೆಯಲ್ಲಿ ಬಿಂಬಿತವಾಗುತ್ತಿದೆ. ಆದ್ದರಿಂದ ಮದುವೆಯ ವ್ಯವಸ್ಥೆಯಲ್ಲಿ ಮೊದಲಿದ್ದ ಭದ್ರತೆಯ ಚೌಕಟ್ಟು ಸಡಿಲವಾಗುತ್ತಿದೆ.

ಹಿರಿಯರು ಏರ್ಪಡಿಸಿದ ಸಂಬಂಧ ಇರಲಿ, ವಯಸ್ಕ ಗಂಡು ಹೆಣ್ಣು ತಾವೇ ನಿರ್ಧರಿಸಿಕೊಂಡ ಸಂಬಂಧ ಇರಲಿ, ಮದುವೆ ಚೌಕಟ್ಟಿಗೆ ಒಳಪಟ್ಟ ಮೇಲೆ ಅದು ಜೀವಿತಾವಧಿಯ ಬಾಂಧವ್ಯ (ಜನುಮ ಜನುಮದಾ ಅನುಬಂಧ!) ಎಂಬುದು ಭಾರತೀಯ ಸಮಾಜದಲ್ಲಿ ಉಳಿದುಕೊಂಡ ನಂಬಿಕೆ. ದಾಂಪತ್ಯದ ಅಡಿ ಇರಿಸಿದ ನಂತರ ಗಂಡು ಹೆಣ್ಣು ಪರಸ್ಪರ ಅರ್ಥ ಮಾಡಿಕೊಂಡು ರಸಿಕ ಜೀವನವನ್ನು ನಡೆಸುವುದು, ಅದು ಹಳಸುವ ಮೊದಲೇ ಸಂತಾನೋತ್ಪತ್ತಿಗೆ ಮುಂದಾಗಿ ಪೀಳಿಗೆಯನ್ನು ಮುಂದುವರಿಸುವುದು, ಮಕ್ಕಳ ಪ್ರೀತಿಯ ಸಾಂಗತ್ಯದಲ್ಲಿ ಬಲಗೊಳ್ಳುವ ಪತಿ ಪತ್ನಿಯರ ನಡುವಣ ಅನುಬಂಧ, ಪರಸ್ಪರ ಅವಲಂಬನೆ– ಕುಟುಂಬ ವ್ಯವಸ್ಥೆಯನ್ನು ಬಲಗೊಳಿಸುವ ಅಂಶಗಳು. ಇದರೊಂದಿಗೆ ಹೆತ್ತವರ ಜತೆಗಿನ ಸಹಬಾಳ್ವೆಯೂ ಸೇರಿ ಮನೆಯೆಂದರೆ ಸಂರಕ್ಷಿತ ತಾಣ, ದೈಹಿಕ ವಿಶ್ರಾಂತಿಗೂ, ಮಾನಸಿಕ ಶಾಂತಿಗೂ ಆಸರೆಯಾದ ವ್ಯವಸ್ಥೆ.

ಸಾಮಾಜಿಕ ಬದುಕು ಹೆಚ್ಚು ಹೆಚ್ಚು ಸುಧಾರಣೆಯಾಗುತ್ತ, ಗಂಡಿನಷ್ಟೇ ಸಮರ್ಥವಾಗಿ ಹೆಣ್ಣು ಕೂಡ ಈಗಿನ ಎಲ್ಲ ಕ್ಷೇತ್ರಗಳಲ್ಲೂ ದುಡಿಮೆಯಲ್ಲಿ ತೊಡಗಿರುವಾಗ ಮೊದಲಿದ್ದ ಸಾಂಪ್ರದಾಯಿಕ ಲೆಕ್ಕಾಚಾರಗಳಲ್ಲಿ ಬದಲಾವಣೆ ಕಂಡಿದೆ. ಹೆಣ್ಣು ಮೊದಲಿದ್ದಂತೆ ಗಂಡಿನ ಅನುವರ್ತಿಯಾಗಿ, ಆದೇಶಗಳನ್ನು ಪಾಲಿಸುವ ಹಂತದಿಂದ ಆದೇಶ ಮಾಡುವ, ಸ್ವಂತ ನಿರ್ಧಾರ ಕೈಗೊಳ್ಳುವ, ತನ್ನ ಬೇಕು ಬೇಡಗಳನ್ನು ನಿರ್ಧರಿಸಿಕೊಳ್ಳುವ ಮಟ್ಟಕ್ಕೆ ಬೆಳೆದಿದ್ದಾಳೆ. ಹೆಣ್ಣಿನ ಈ ಬೆಳವಣಿಗೆಯನ್ನು ಒಪ್ಪಿಕೊಳ್ಳಲಾಗದ ಗಂಡಿನ ಹಿಂಜರಿಕೆ ಬೇರೆ ಬೇರೆ ರೀತಿ ಪ್ರಕಟವಾಗಿ ಒಟ್ಟಾರೆ ಕುಟುಂಬ ವ್ಯವಸ್ಥೆಯಲ್ಲಿ ಬಿರುಕು ಮೂಡಲು ಕಾರಣವಾಗಿದೆ.

ಇದು ಸಣ್ಣ ಪುಟ್ಟ ಕಾರಣಗಳಿಗಾಗಿ ದಂಪತಿ ಪರಸ್ಪರ ಬೇರೆಯಾಗುವುದಕ್ಕೆ ಕಾನೂನಿನ ಮಾನ್ಯತೆಯನ್ನು ಪಡೆಯುವ ಹಂತಕ್ಕೆ ಹೋಗುತ್ತಿದೆ. ಮದುವೆಯ ಚೌಕಟ್ಟಿಗೆ ಒಳಪಟ್ಟ ಗಂಡು ಹೆಣ್ಣು ಇಬ್ಬರೂ ಸುಶಿಕ್ಷಿತರಾಗಿದ್ದು ಹೊಂದಾಣಿಕೆ, ಸಾಮರಸ್ಯ, ಪರಸ್ಪರ ಗೌರವಿಸುವ ಮನೋಭಾವ ತಾಳದಿದ್ದರೆ ಸಹಬಾಳ್ವೆ ಕಷ್ಟವಾಗುತ್ತದೆ. ಕುಟುಂಬ ವ್ಯವಸ್ಥೆ ಅಷ್ಟೇನೂ ಬಿಗಿ ಇಲ್ಲದ ಹಾಗೂ ಮುಕ್ತ ಸ್ವಾತಂತ್ರ್ಯ ವಿಪುಲವಾಗಿರುವ ಅಮೆರಿಕ, ಬ್ರಿಟನ್‌ನಂತಹ ಸಮಾಜಗಳಿಗೆ ಸಮಾನವಾಗಿ ಭಾರತೀಯ ಪರಿಸರದಲ್ಲಿಯೂ ಸಣ್ಣ ಸಣ್ಣ ಕಾರಣಗಳಿಗಾಗಿ ವಿಚ್ಛೇದನಕ್ಕೆ ಯತ್ನಿಸುವ ಗಂಡು ಹೆಣ್ಣಿನ ವರ್ತನೆ ಆಶ್ಚರ್ಯಕರ ಎನಿಸುತ್ತದೆ.

ಹೆಂಡತಿ ಚೆನ್ನಾಗಿ ಡ್ರೆಸ್ ಮಾಡುತ್ತಿಲ್ಲ; ಅಡುಗೆ ಬಡಿಸಲು ಬರುತ್ತಿಲ್ಲ, ಮೊಟ್ಟೆ ಮಾಡಿಕೊಂಡು ತಿನ್ನುತ್ತಾಳೆ. ಅತ್ತೆ ಮಾವನ ಜೊತೆಗೆ ವಾಸಿಸಲು ಬಯಸುತ್ತಿಲ್ಲ, ಮನೆ ಕೆಲಸ ಮಾಡುತ್ತಿಲ್ಲ– ಎಂಬಂಥ ಕಾರಣಗಳನ್ನು ಗಂಡಸರು ವಿವಾಹ ವಿಚ್ಛೇದನಕ್ಕೆ ಕೋರುವ ಅರ್ಜಿಗಳಲ್ಲಿ ನಮೂದಿಸುತ್ತಿರುವ ನಿದರ್ಶನಗಳಿವೆ. ‘ಚೆನ್ನಾಗಿ ಡ್ರೆಸ್ ಮಾಡುತ್ತಿಲ್ಲ ಎನ್ನುವುದು ಅವನ ಆಕ್ಷೇಪವಾದರೆ, ಅದು ನನ್ನ ವೈಯಕ್ತಿಕ ಸ್ವಾತಂತ್ರ್ಯದ ಮೇಲಿನ ದಬ್ಬಾಳಿಕೆ; ಅದೇ ಕಾರಣವಾಗಿದ್ದರೆ ನನ್ನ ಪ್ರೀತಿ, ನಿಷ್ಠೆ ಮತ್ತು ಹೊಂದಾಣಿಕೆಯ ಪ್ರವೃತ್ತಿಗೆ ಅವನೂ ಅರ್ಹನಲ್ಲ’ ಎಂದು ಗಂಡನ ವಿರುದ್ಧ ಪ್ರತಿಯಾಗಿ ಹೇಳಬಲ್ಲ ಸ್ಥೈರ್ಯ ಈಗಿನ ಸುಶಿಕ್ಷಿತ ಹೆಣ್ಣುಗಳಿಗಿದೆ. ಗಂಡ ಲೈಂಗಿಕವಾಗಿ ಅಸಮರ್ಥ ಎಂದು ಧೈರ್ಯವಾಗಿ ಹೇಳುವ ಹೆಣ್ಣು ಈಗಿನ ಸ್ತ್ರೀ ಸಾಮರ್ಥ್ಯದ ಪ್ರತೀಕ.

ಏನೇ ಇದ್ದರೂ ಸಣ್ಣ ಪುಟ್ಟ ಕಾರಣಗಳಿಗೆ ಮದುವೆಯ ಚೌಕಟ್ಟಿನಿಂದ ಹೊರ ಬರುವುದರಿಂದ ವೈಯಕ್ತಿಕ ಸ್ವಾತಂತ್ರ್ಯವನ್ನು ಕಾಯ್ದುಕೊಂಡ ಸಮಾಧಾನ ಇರಬಹುದಾದರೂ ಹೊಂದಾಣಿಕೆಯ ಮನೋಭಾವ ನೀಡುವ ಪ್ರಯೋಜನಗಳನ್ನು ನಿರ್ಲಕ್ಷಿಸಲಾಗದು. ಸಹಬಾಳ್ವೆ, ಸಾಮರಸ್ಯ, ಹೊಂದಾಣಿಕೆ, ಸಹಿಷ್ಣುತೆ, ಪರಸ್ಪರ ಗೌರವ– ಇಂಥ ಮೌಲ್ಯಗಳು ಏಕಾಏಕಿ ಉದ್ಭವಿಸಿದ ಸಂಗತಿಗಳಲ್ಲ. ದಾಂಪತ್ಯದ ಯಶಸ್ಸು ನಾಗರಿಕ ಸಮಾಜದ ನಿದರ್ಶನ.

■ ಲಕ್ಷ್ಮಣ ಕೊಡಸೆ

‘ಚೆನ್ನಾಗಿ ಡ್ರೆಸ್ ಮಾಡುತ್ತಿಲ್ಲ ಎನ್ನುವುದು ಅವನ ಆಕ್ಷೇಪವಾದರೆ, ಅದು ನನ್ನ ವೈಯಕ್ತಿಕ ಸ್ವಾತಂತ್ರ್ಯದ ಮೇಲಿನ ದಬ್ಬಾಳಿಕೆ; ಅದೇ ಕಾರಣವಾಗಿದ್ದರೆ ನನ್ನ ಪ್ರೀತಿ, ನಿಷ್ಠೆ ಮತ್ತು ಹೊಂದಾಣಿಕೆಯ ಪ್ರವೃತ್ತಿಗೆ ಅವನೂ ಅರ್ಹನಲ್ಲ’ ಎಂದು ಗಂಡನ ವಿರುದ್ಧ ಪ್ರತಿಯಾಗಿ ಹೇಳಬಲ್ಲ ಸ್ಥೈರ್ಯ ಈಗಿನ ಸುಶಿಕ್ಷಿತ ಹೆಣ್ಣುಗಳಿಗಿದೆ. ಗಂಡ ಲೈಂಗಿಕವಾಗಿ ಅಸಮರ್ಥ ಎಂದು ಧೈರ್ಯವಾಗಿ ಹೇಳುವ ಹೆಣ್ಣು ಈಗಿನ ಸ್ತ್ರೀ ಸಾಮರ್ಥ್ಯದ ಪ್ರತೀಕ.


ಸಾಂಗಳೇಕರ್